
# ಸ್ವಾತಂತ್ರ್ಯ ಸಮರದ ಲಾವಣಿಗಳು

## ಲಾವಣಿಗಳ ಸಂಗ್ರಹ



ಎನ್. ವಿಷಕಂಠರಾವ್

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೧೨

# ಸ್ವಾತಂತ್ರ್ಯ ಸಮರದ ಲಾವಣಿಗಳು


ಲಾವಣಿಕಾರ :

**ಎಸ್. ವಿಷಕಂಠರಾವ್**

ಲಾವಣಿ ವಿದ್ವಾನ್, ಮೈಸೂರು



**ಕರ್ನಾಟಕ ಜಾನಪದ ಪರಿಷತ್ತು**

ನಂ.1, ಜಲದರ್ಶಿನಿ ಬಡಾವಣೆ,

ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,

ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

**SWATHANTHRYA SAMARADA LAVANIGALU -**
Ballads on Freedom Struggle - by **N. Vishakanta Rao.**
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

**ಹಕ್ಕುಗಳನ್ನು ಕಾಯ್ದಿರಿಸಿದೆ**

ಗ್ರಂಥ ಪ್ರಕಟಣ ಸಲಹಾ ಸಮಿತಿ

ನಾಡೋಜ ಡಾ. ಜಿ. ನಾರಾಯಣ ಅಧ್ಯಕ್ಷರು
ಶ್ರೀ ಟಿ. ತಿಮ್ಮೇಗೌಡ ಸದಸ್ಯರು
ಶ್ರೀಮತಿ ಇಂದಿರಾ ಬಾಲಕೃಷ್ಣ ಸದಸ್ಯರು
ಶ್ರೀ ಗೊ.ರು. ಚನ್ನಬಸಪ್ಪ ಸದಸ್ಯರು
ನಾಡೋಜ ಡಾ. ಸಿದ್ಧಲಿಂಗಯ್ಯ ಸದಸ್ಯರು
ಡಾ. ಎಂ.ಎ. ಜಯಚಂದ್ರ ಸದಸ್ಯರು
ಪ್ರೊ. ಡಿ. ಲಿಂಗಯ್ಯ ಸಂಪಾದಕರು
ಡಾ. ಚಕ್ಕೆರೆ ಶಿವಶಂಕರ್ ಕಾರ್ಯದರ್ಶಿ-ಸಂಚಾಲಕರು

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ಲಾವಣಿವಿದ್ವಾನರಾದ **ಎನ್. ವಿಷಕಂಠ ರಾವ್** ಅವರ ಲಾವಣಿಗಳಿಂದ ಆಯ್ದು **ಸ್ವಾತಂತ್ರ್ಯ ಸಮರದ ಲಾವಣಿಗಳು** ಎಂಬ ಗ್ರಂಥವನ್ನು ಸಿದ್ಧಪಡಿಸಿದೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೫-೦೭-೨೦೦೮

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ಸ್ವಾತಂತ್ರ್ಯ ಸಮರದ ಲಾವಣಿಗಳು

## ೧. ಹೈದರ್ ಮತ್ತು ಟಿಪ್ಪುಸುಲ್ತಾನ್ ಲಾವಣಿ

### ಪದ – ಕಡಿಚಾಲ್

೧

ತುರಾದ ಬಾವುಟ ಫರಂಗಿದರಬಾರ್ ಭಾರತ ಭೂಮಿಲಿ ಸ್ಥಿರವಾಯ್ತು
ಮೀರಸಾದಕನ ಪರಮವಂಚನೆಲಿ ಹಜರತ್ ಟೀಪುಗೆ ಸೋಲಾಯ್ತು ॥ಪಲ್ಲವಿ॥

ಹೇದರ್ ವಂಶಕೆ ಮೊದಲನೆ ಪುರುಷನು ಷೇಕ್ವಲಿ ಮಹಮದ್ದೆಂಬುವನು
ಹೈದರ್ ಅಲಿಯ ತಾತನು ಷೇಕ್ಕಲಿ ಗುಲಾಂದೋಸ್ತಫನ ಮಹಮ್ಮದನು ॥
ಹೈದರ್ ತಾತನು ಖೋಹೀರ್ ದೇಶವ ತ್ಯಜಿಸಿ ಸೀರ್ಯದೊಳು ನೆಲೆಸಿದನು
ಹೈದರ್ ಆಲಿಯ ಪಿತನು ಫತಾಅಲಿ ಸೀರ್ಯದ್ನವಾಬನೊಳ್[೧] ಸೇರಿದ್ದನು ।
ಬುದ್ಧಿಸಮನ್ವಿತ ಫತಾಅಲೀಗೆ ನಾಯ್ಕನೆಂಬ ಬಿರುದಿತ್ತಿನ್ನು
ಹೈದರ್ ಮಾತೆಯು ಮಜೀದಬೇಗಂ ಕಷ್ಟದಿ ಬಳಲಿದವಳಿನ್ನು ॥
ಹೈದರ್ ಆಲಿಯು ಸಾವಿರದೇಳ್ನೂರ್ ವರ ಹದಿನೆಂಟರೊಳ್[೨] ಜನಿಸಿದನು
ಹೈದರ್ ಆಲಿಯು ಖುರೈಷಿ ಸಂತತಿ ಮಹಮ್ಮದ್ವಂಶಕೆ ಸೇರಿದ್ದನು ॥

### ದೊಡ್ಡುಡನ್

ಹೈದರ್ ಆಲಿಯು ಸೋದರನಾಗಿದ್ದ ಷಬ್ಬಾಜಖಾನನ ಬಲುಮೆಯಲಿ
ಯದುಕುಲದರಸರ ಪದಸ್ತುತಿಗೈಯುತ ಪದಪಿನೊಳಿದ್ದನು ಭಕ್ತಿಯಲಿ ॥
ಹೈದರ್ ಪತ್ನಿಯು ಫಾತಿಮ ಬೇಗಂ ಸಮ್ಮೋಹನಾಸ್ತ್ರದಿ ಮುಳುಗುತಲಿ

ಯದುನೃಪ ಪದಚ್ಯುತಿ ಗೈದ ಮಹಿಮ ಆ ಟೀಪುಸುಲ್ತಾನನ ಪಡೆಯುತಲಿ॥

**ಚಿಕ್ಕಡನ್**

ಹೈದರಾಲಿ ಸ್ವಕಾರ್ಯ ಸ್ವಾಮಿಕಾರ್ಯದೊಳಗಿದ್ದ
ಕದನದೀ ಬೆಂಗ್ಳೂರಿನ ರಾಜನನ್ನು ಜಯಿಸಿದ್ದ ।
ಯದುಕುಲದ ಅರಸರಿಂದಿನಾಮನ್ನು ಪಡೆದಿದ್ದ
ತದನಂತರ ಕಡುಪಿನೊಳೊಡೆಯಗೆ ಕಡಿಯಲಿಕೆದ್ದ ॥

**ಗುಲ್ಲುಡನ್**

ಹೈದರನು ಅಂಧಶ್ರದ್ಧೆಯಲ್ಲಿ
ಯದುನೃಪ ಇಮ್ಮಡಿ ಒಡೆಯರಲಿ
ಛದಮನೇ ಕಲ್ಪಿಸಿ ಪದಪಿನಲಿ
ಪ್ರದಪ್ರಮುಖರಿಗೆ ಅವಧೂತನಾದನು ಪದವಿ ಮೈಸೂರಲ್ಲಿ ॥

**ಶ್ಲೋಕ**

ಪುತ್ರನೆಂಬುವ ಪ್ರೀತಿಯಿಂ ಪರಿವರ್ತನಾ ಮಹಾಶಯನಿಗೆ
ಪಿತೃವಾಗಲು ಪಾತ್ರರಾದರು ವಿತೃಷ್ಣ ವಿಷಮಾಪತ್ತಿಗೆ ॥

**ಚಾಲ್**

ನಿರಂಕುಶತ್ವದ ಪ್ರವರ್ಧಮಾನದಿ ಹೈದರ್ ಪದವಿಯು ಸ್ಥಿರವಾಯ್ತು
ಮೀರಸಾದಕನ ಪರಮವಂಚನೆಲಿ ಹಜರತ್ ಟೀಪುಗೆ ಸೋಲಾಯ್ತು ॥

೨

ಪ್ರತಾಪಶೋಭಿತ ಹೈದರ್ ಆಲಿಗೆ ಚಿತ್ರದುರ್ಗದ್ಮೇಲೆ ನಿಗವಿತ್ತು
ಜಿತೇಂದ್ರಿಯನು ವರ ಮದಕರಿನಾಯ್ಕನ ಅಭೂತ ಪೂರ್ವದ ಭಯವಿತ್ತು ॥
ಚಿತ್ರವಿಚಿತ್ರದ ಚಿತ್ರದುರ್ಗದ್ಮೇಲೆ ತ್ರಿಲಕ್ಷ ಹೈದರ್ ಫೌಜ್ ಬಂತು
ಸತ್ವಾಟೋಪದಿ ಚಿತ್ರಕಲ್ ದುರ್ಗಕೆ ಮುತ್ತಿದ ಹೈದರು ಬೇಸತ್ತು ॥

ಚಿತ್ರದುರ್ಗ ಬಿಲ್ಲಾಗರರ ಹೂಂಕೃತಿ–ಹೈದರ್ ಹೃದಯವ ನಡುಗಿಸಿತು
ಕೃತಪರಿಲಂಬನಾಗಿದ್ದನು ಹೈದರ್ ಪಥವನು ಕಾಣದೆ ಸುತ್ತಮುತ್ತು ॥
ನಿತ್ತರಿಸದೆ ಬಲು ವಿತರ್ಕದಿಂದಲಿ ಕೃತಕವಿದ್ಯಕತಿಮನವಿತ್ತು
ಗ್ರಥಿತವಾದ ಘನ ಬತೇರಿ ದಾಂಟೀ ಪ್ರತಾರಿಸಿದನಾಗೊಳಸುತ್ತು ॥

### ದೊಡ್ಡುಡನ್

ಘೋರಹೂಂಕಾರ ಪ್ರತಿಭಟಧಿಕ್ಕಾರ ರಂಗೈಯನ್ ಕೋಟೆಯ ಬಾಗಿಲೊಳು
ಭೇರಿಯ ಭಾಂಕಾರ ಢಕ್ಕಾ ಢಮತ್ಕಾರ ಭಂಗಾರಗಟ್ಟಿಯ ದ್ವಾರದೊಳು ॥
ಫಿರಂಗಿಮಳೆಪೂರ ಸಿಂಜಿನಿಠಂಕಾರ ನಾಲ್ಕಾರು ಕೋಟೆಯ ಬಾಗಿಲೊಳು
ಪರಿಘಚಕ್ರಾಯುಧ ಮುಸಲದ ಸಮರವು ನಡದಿತು ಮುಸಲದ ದ್ವಾರದೊಳು[9]॥

### ಚಿಕ್ಕುಡನ್

ಇಷ್ಟು ತಂತ್ರಗಳಿದ್ದರು ಕಷ್ಟ ತಪ್ಪದೆ ಮದಕರಿಗೆ
ಶ್ರೇಷ್ಠ ಉಚ್ಚಂಗಿ ಯಕನಾಥೇಶ್ವರೀಯ[7] ಕೃಪೆತೊಲಗೆ ।
ದುಷ್ಟಕಾರಸ್ಥಾನದಾ ದ್ರೋಹ ಹೆಚ್ಚೆ ಒಳಗೊಳಗೆ
ಘಟಿಸಿತೂ ದುರ್ಗದಾ ಸರ್ವತನವು ಹೈದರಗೆ ॥

### ಗುಲ್ಲುಡನ್

ಪೂರಬೇಸತ್ತು ಹೈದರ್ ಸೈನ್ಯ
ತೋರಿದರು ತಮ್ಮ ಧೈರ್ಯ ದೈನ್ಯ ।
ಬೀರಿದರು ನೋಟಕರಿಗೆ ಗಣ್ಯ
ಧುರದೊಳು ತಮ್ಮಯ ಶೌರ್ಯವ ತೋರುತ ಪಡೆದರು ಬಹುಮಾನ್ಯ ॥

### ಶ್ಲೋಕ

ಪೃಥುಳಭುಜಬಲ ಕ್ಷಿತಿಗೆ ತೋರುತ ಗತಿಸಿಹೋದನು ನಾಯ್ಕನು
ಹಿತಶತ್ರುತ್ವವ ಆಪ್ತರ್[8] ಗೈದರು ಹೈದರ್ ತೃಣ ಪುಲಿಯಾದನು ॥

**ಚಾಲ್**

ಪರಿಪರಿ ಹೈದರ್ ಉಜ್ವಲಗುಣಗಳು ಪ್ರಜ್ವಲ ಬೆಳಕಿಲಿ ಬಯಲಾಯ್ತು
ಮೀರಸಾದಕನ ಪರಮ ವಂಚನೆಲಿ ಹಜರತ್ ಟೀಪುಗೆ ಸೋಲಾಯ್ತು ॥

೨

ಪರಪಿದರೌದ್ರದ ಮರಾಠಿ ಸೈನ್ಯಕೆ ಪರಿಪರಿಸಮರದಿ ಹೈದರನು
ಉರುತರ ಭೀಕರ ಶೌರ್ಯವ ತೋರುತ ಪರಿದು ಸೇರಿದ್ದನು ಪಟ್ಣವನ್ನು ।

ನರರಿಗೆ ಅಸದಳವೆನಿಸಿದ ಕೊಡಗನು ತಂತ್ರದ ಮಹಿಮೆಯಿಂದ್ಹೊಂದಿದ್ದನು
ಅರಿಯಿರಿ ಓಟದ ಪಾತದ ನೈಜಾಂ ದೊರೆಯನು ಸಮರದಿ ಗೆದ್ದಿದ್ದನು ॥
ಫಿರಂಗಿ ಸೈನ್ಯಕ್ಕೆ ಫ್ರೆಂಚರ ದಳಪತಿ ಮಾನ್‌ಷಿಯರ್ ಲಾಲಿಯನಿಟ್ಟಿದ್ದನು
ಸರಸದ ನಟಣೆಲಿ ಸಮರವ ಗೈಯುವರೆಂದು ಇಂಗ್ಲೀಷರ ತ್ಯಜಿಸಿದ್ದನು ॥
ಊರು ದುರ್ಗಗಳ ಕೊಳ್ಳೆಯ ಹೊಡೆಯುತ ಚಿತ್ತೂರು ಆರ್ಕಾಟ್ ಮುತ್ತಿದ್ದನು
ವರಶರಣಾಗತ ಚಿತ್ತೂರ್ ನವಾಬನಪಟ್ಣದ ಸೆರೆಯೊಳಗಿಟ್ಟಿದ್ದನು ॥

**ದೊಡ್ಡುಡನ್**

ಧುರಧೀರ ಶೂರರ ಸೆರೆಯೊಳಗಿಡಿಸುತ ಹೊರಟನು ಆರ್ಕಾಟ್ ಮುತ್ತಿಗೆಗೆ
ವರಶಿರಸ್ತ್ರಾಣವ ಧರಿಸಿ ಆರ್ಕಾಟಿನ ನವಾಬ ಸೇರಲು ಮದ್ರಾಸಿಗೆ ॥
ಪರಿದ ನವಾಬನು ಸ್ವಜಾತಿ ಅರಸನು ಎನ್ನುವ ಬಿಂಕದಿಂದೂರೊಳಗೆ
ಉರುತರ ದರ್ಪದಿ ನಾನಾ ಆನ್ಯಾನ್ವಿತ ಕಾರ್ಯಗಳ್ನಡಿಸಿದ ಘನದೊಳಗೆ ॥

**ಚಿಕ್ಕುಡನ್**

ಇಂತಧಿಕ ಸತ್ವದಾಟೋಪದಿಂದ ಹೈದರನು
ಪಂಥಮುಳ್ಳ ಪೂರ್ಣಯ್ಯನ ಅಖಿಲ ತಂತ್ರದೊಳಗಿನ್ನು ।

ಅತ್ಯಂತ ಧೃತಿಯಲೀ ಆಳುತ್ತಿದ್ದ ರಾಜ್ಯವನು
ಇಂತಪ್ಪ ವೀರನಿಗೆ ತಂದಿತೊಂದು ರೋಗವನು ॥

**ಗುಲ್ಲುಡನ್**

ಬೆನ್ನುಫಣಿಯೆಂಬ ರೋಗದಿಂದ
ಮೇಣು ಶ್ರೀರಂಗನ ಕೃಪೆಯಿಂದ ।
ತನುವನೂ ಮರೆತು ಗಮನಗೈದ
ತನ್ನಯ ಮೊಹರಿಗೆ ಉನ್ನತ ಪದ್ಯವ ಘನದಿ ರಚಿಸಿಯಿದ್ದಾ ॥

**ಶ್ಲೋಕ**

ಬಹರೆ ತಸ್ಕೀರ ಜಯಷುದ್ ಫತಹ ಹೈದರ್ ಆಷ್ಕಾರ್
ಲಾಫತಾ ಇಲ್ಲಾ ಅಲೀಲಾಸೈಪ್ ಇಲ್ಲಾ ಜುಲ್ಪಿಕಾರ್[2] ॥

**ಚಾಲ್**

ವೀರಾಗ್ರಣಿ ನಮ್ ಹೈದರ್ ದರಬಾರ್ ಶ್ರೀರಂಗಪಟ್ಣದಿ ಮೆರದೋಯ್ತು
ಮೀರಸಾದಕನ ಪರಮವಂಚನೆಲಿ ಹಜರತ್ ಟೀಪುಗೆ ಸೋಲಾಯ್ತು ॥

೪

ಅಪ್ಪನ ನಂತರ ಟೀಪುಸುಲ್ತಾನನು ಮುಪ್ಪುರ ತನಗೆಣೆ ನಹಿಯೆನುತಾ
ಕೋಪಾಟೋಪದಿ ಕಪ್ಪಾ ವಸೂಲಿಲಿ ಚಪ್ಪನ್ನಾರ್ ದೇಶವ ಗೆಲ್ಲುತ್ತಾ ॥
ಸುಪಥ ಬ್ರಿಟೀಷರ ಕಾಫರರೆನ್ನುತ ಈಸ್ಟ್ ಇಂಡ್ಯಾ ಕಂಪನಿ ಧ್ವಂಸಿಸುತಾ
ಉಪಮರ್ದನಕಾರರ ಭೂಪ ಮರಾಠರ ಮತ್ತು ನೈಜಾಮನ ಕಾಡಿಸುತಾ
ಅಪಜಯವೆಂಬುದ ಸ್ವಪನದೊಳರಿಯೆನೆಂದಪಜಯ ಸ್ತ್ರೀಸೆರಗ್ಹಿಡಿಯುತ್ತಾ
ಸುಪುಣ್ಯಪುಂಜದ ಭವ್ಯಮಿತ್ರನಿಗೆ[3] ಅಪ್ರಿಯ ಭಾಜನನಾಗಿರುತಾ ॥
ಕೃಪೆಯಿನಿತಿಲ್ಲದ ಕರ್ಮದ ಸಚಿಕರ ಮರ್ಮೋದ್ಘಾಟನೆಗೆಡೆಗೊಡುತಾ
ವಿಫುಲಸಂಪತ್ತಿನ ಗೋಪುರ ಗುಡಿಗಳ ತೋಪುಗಳಿಂದಲಿ ಕೆಡಹುತ್ತಾ ॥

### ದೊಡ್ಡಡನ್

ಜಾತಿಪ್ರವರ್ತಕ ಕರ್ತವ್ಯನಿಷ್ಠ ನು ಸರ್ವಮತಗ್ರಾಸಿಯಾಗಿರಲು
ಚತುರವರ್ಣದವರತಿಖತಿಯಿಂದಲಿ ತ್ರಿವರ್ಗದವರಿಗೆ ಮೊರೆಯಿಡಲು॥
ನೀತಿಕೋವಿದರು ತ್ರಿವರ್ಗ ರಾಜರು ಗೂಢ ವೈರಿಗಳ ಬಲುಮೆಯೊಳು
ಹತ್ತಿ ಬತೇರಿಯ ಕತ್ತರಿಸಿಟ್ಟರು ಸೈಯ್ಯದ್ ಗಫೂರನ ನಿಮಿಷದೊಳು ॥

### ಚಿಕ್ಕಡನ್

ಪಡುವಣ ದಿಕ್ಕಿನಿಂದಡರಿಬಂದ ಸೈನಿಕರು
ಜೋಡಿಗುಂಡಿನಿಂದ್ಹೊಡೆಯಲು ಅಡಗಿತೊಂದು ತೋಫ್ಖೆಸರು ॥
ನಡೆಗೆಡಿಸಿಬಿಟ್ಟರ್ ಮದ್ದೀನ ಮನೆಯ ಸ್ನೇಹಿತರು
ನೋಡಿ ಬಿಟ್ಟನು ಟೀಪುವು ಬಡಬನಂತೆ ನಿಟ್ಟುಸುರು ॥

### ಗುಲ್ಲುಡನ್

ತಮೋಗುಣ ಲೋಭ ಪೀಡಿತ್ರೆಲ್ಲಾ
ಆಮೋದ ಪ್ರಮೋದದಿಂದೆಲ್ಲಾ ।
ತುಮುಲಘನ ಸಮರಗೈದರೆಲ್ಲಾ
ಸ್ವಾಮಿದ್ರೋಹಿಗಳು ಧೀಮತಿ ಫ್ರೆಂಚರು ಸೌಮ್ಯರಾದರಲ್ಲಾ ॥

### ಶ್ಲೋಕ

ಅಪ್ರತೀಭರ ಸತ್ಯವರ್ತನ ಅಪ್ರತೀಹತವಾಯಿತು
ಅಪ್ರಯೋಜಕ ಮೀರಸಾದಕನಿಂದ ತಂತ್ರವು ಹೆಚ್ಚಿತು ॥

### ಚಾಲ್

ಘೋರಪರಾಕ್ರಮಿ ಮೈಸೂರ್ ಹುಲಿಯಾ–ಗರ್ಜನೆ ಲಂಡನ್ ನಡುಗಿಸಿತು
ಮೀರಸಾದಕನ ಪರಮ ವಂಚನೆಲಿ ಹಜರತ್ ಟೀಪುಗೆ ಸೋಲಾಯ್ತು ॥

ಔ

ಪರವರ್ದಿಗಾರಾಯಾ ಅಲ್ಲಾ ಹೊ ಅಕ್ಬರ್ ಶ್ರೀರಂಗನಾಥನೆ ಪೊರೆಯೆನುತಾ
ಶ್ರೀರಂಗಪಟ್ಟಣ ದರಬಾರೀದಿನ ತೀರಿದೆಂದು ಘನಘೋಷಿಸುತಾ ॥
ಮೀರಿದ ರೌದ್ರದಿ ಯೇರುತ ತುರಗವ ತೂರಿದ ವೈರಿರ ಕೊಲ್ಲುತ್ತಾ
ಕಾರಿಸಿ ರಕುತವ ಅರಿಗಳ ಶಿರಗಳ ಧರಣಿಲಿ ಕೆಡಹುತ "ಧೀನ್" ಯೆನುತಾ॥
ಫರಂಗಿ ಜನಗಳ ಮರಣದ ಕೌತುಕ ವಾಲ್ಟರ್ ಜನರಲ್ ನೋಡುತ್ತಾ
ವೆರಿಸೂನ್ ಕಮ್ಹಿಯರ್ ಹೆಲ್ಫ್ ಹೆಲ್ಫ್ ಯನ್ನುತ ಮೈಸೂರ್ ಹುಲಿಯನು ಸಂಧಿಸುತ್ತಾ॥
ಕೊರಳಿಗೆ ಗುರಿಯನು ಸ್ಫುರಿಸದಂತಿಟ್ಟೂ ಗುಂಡಿನಿಂದ್ಹೊಡೆಯಲು "ಫೇ"ಯೆನುತಾ
ಸೇರಿದನಂತಕನರಮನೆ ನಂತರ ಗೋಧೂಳಿ ಸಮಯದಿ ಟೀಪುವು ತಾ.

**ದೊಡ್ಡುಡನ್**

ಗೊಂದಲವೆದ್ದಿತು ಅಂದಿನ ಪಟ್ಣದಿ ಚಂದದ "ಸುಲ್ತಾನ್" ಮಡಿಯುತಲೆ
ಗೊಂದಲ ಸುದ್ದಿಯ ಸುಂದರ ಪತ್ನಿಯು ರೊಬಿಯಾಬೀಬಿಯು ಕೇಳುತಲೆ॥
ಇಂದಿನ ಕಮಲಜ ಬಾಂಧವ ಮಡಿದನು ಎಂದು ಭೀಷಣಾವಸ್ಥೆಯಲೆ
ವಂದಿಮಾಗಧರು ಬಂಧುಬಾಂಧವರು ಹಿಂದೂ ಬ್ರಿಟೀಷರ ಮೇಳದಲೆ ॥

**ಚಿಕ್ಕುಡನೆ**

ತನ್ನ ರಮಣನ ಶವವನು ಶೃಂಗರಿಸಿಡುತಲೆ ಬಳಲಿ
ಘನ ಆಂಗ್ಲರು ತಮ್ಮಯ ಬ್ಯಾಂಡು ಬಾಜರದಲ್ಲಿ ।
ಮೇಣ್ ಸನ್ಮಾನಕ್ಕೋಸುಗ ತೋಪುಗಳ್ಹಾರಿಸಿ ಅಲ್ಲಿ
ಕೊನೆ ವಿಧಿಯನು ಗೈದರು ಹೈದರ್ ಗೋರಿ ಬಳಿಯಲ್ಲಿ ॥

**ಗುಲ್ಲುಡನ್**

ತ್ರಿವರ್ಗದ ರಾಜರುಂಡ ಮೇಗೆ
ನವಜ್ಯೋತಿ ಕನವಳ್ಳೀಶರೀಗೆ ।

ಕೇವಲಾ ವಿಮಲ ದೇಶಗಳಿಗೆ[೨೬]
ಅವನಿಪನೆನಿಸಿದರ್ರ ವಿರಳಕಾಂತಿಯ ಮುಮ್ಮಡಿ ಒಡೆಯರಿಗೆ ॥

**ಶ್ಲೋಕ**

ಸುರುಚಿರಾ ಮಹಿಶೂರ ಪಟ್ಟಣ[೨೭] ಕೃಷ್ಣರಾಜರ ಒಲುಮೆಲಿ
ಸುರಪುರೀಶನ ಪುರವನಣಕಿಸಿ ಮೆರೆಯುತ್ತಿರುವುದು ಜಗದಲಿ ॥

**ಚಾಲ್**

ದೊರೆ ಶೇಷನ್‌ಗಿರಿ ಹರಿ ಪುಟ್ಟಣ್ಣನ ತುರಾಬ್ರಹ್ಮ ನಿಜ ನಿಲುವಾಯ್ತು
ಗುರುಮರಿಯಣ್ಣನ ವರ ನೀಲ್ಕಂಠರ ತರತರ ಕೃತಿಗಳು ಬಯಲಾಯ್ತು ॥
೧೯೩೪

**ಅಡಿಟಿಪ್ಪಣಿಗಳು**

೧ ಸೀರ್ಯದ ನವಾಬನು-ದಿಲಾವರ್ ಖಾನ್.

೨ ಹೈದರ್ ಜನಿಸಿದ ಹಿಜಿರಿ ೧೭೧೮.

೩ ಹೈದರ್ ಕಾಲದಿ ಬೆಂಗಳೂರಿನಲ್ಲಿ ಲಕ್ಷ್ಮಣರಾಜನೆಂಬುವನು ಆಳುತ್ತಿದ್ದನು.

೪ ಈ ವನಕೆಯ ದಿಡ್ಡಿಬಾಗಿಲಿನಿಂದಲೇ ಹೈದರ್ ಸೈನ್ಯವು ಒಳಗೆ ನುಗ್ಗಿ ಚಿತ್ರದುರ್ಗವನ್ನು ಹಿಡಿದುದು.

೫ ಉಚ್ಚಂಗಿ-ಯಕನಾಥೇಶ್ವರಿ ಈ ಶಕ್ತಿಯರು ಮದಕರಿನಾಯ್ಕನ ಕುಲ ದೇವತೆಯರುಗಳು.

೬ ಮದಕರಿನಾಯ್ಕನ ಆಪ್ತರು ಕಳ್ಳಿಬೇಲಿ ನರಸಪ್ಪನೆಂಬ ಮಂತ್ರಿಯು ಮುಸಲ್ಮಾನ ಸೈನಿಕರುಗಳಿಂದ ಚಿತ್ರದುರ್ಗವು ಹೈದರ್ ಕೈವಶವಾಯಿತು.

೭ ಶ್ಲೋಕ=ಹೈದರನಿಗೆ ದೇವರಲ್ಲಿ ಭಕ್ತಿಯು ಬಹಳವಾಗಿತ್ತು. ಆದ್ದರಿಂದ ಅವನಿಗೆ ಶತ್ರುಗಳಿಂದ ಮರಣವಿರಲಿಲ್ಲವೆಂದು ಮತ್ತು ದೇವರಲ್ಲಿ ಭಕ್ತಿ ಇಟ್ಟಿರುವವರಿಗೆ ಯಾವಾಗಲೂ ಕೆಡಕಾಗುವದಿಲ್ಲವೆಂದು ಅರ್ಥ ಸಮೂಹ ಕೂಡಿಸಿ ತನ್ನ ಮೊಹರಿಗೆ ಮೇಗಳ ಶ್ಲೋಕವನ್ನು ಪಂಡಿತರಿಂದ ರಚಿಸಿದ್ದನು.

೮ ಭವ್ಯಮಿತ್ರನು=ದೀವಾನ್ ಪೂರ್ಣಯ್ಯನವರು.

೯ ಪಡುವಣದ ದಿಕ್ಕು=ಚಂದ್ರವನ. ಇಲ್ಲಿನಿಂದಲೇ ಬ್ರಿಟಿಷರು ಕೋಟೆಯನ್ನು ಮುತ್ತಿ ಲಗ್ಗೆ ಹತ್ತಿದುದು.

೧೦ ಭಾರಿ ತೋಪು-(ಉತ್ತರದಲ್ಲಿ) ಡಂಜನ್ನಿನ ಮೇಲ್ಭಾಗದಲ್ಲಿ ಇರಿಸಿದ್ದಿತು. ಈಗ ಡಂಜನ್ನಿನಲ್ಲೇ ಉಸುರಡಗಿ ಬಿದ್ದಿರುವುದು. ಈ ತೋಪಿನಿಂದಲೇ ಟೀಪು ಸುಲ್ತಾನನ ಪಂಚಪ್ರಾಣಗಳು ಮತ್ತು ಶ್ರೀರಂಗಪಟ್ಟಣವು ಉಳಿದಿದ್ದಿತು.

೧೧ ಮದ್ದಿನ ಮನೆಗಳಿಗೆಲ್ಲಾ ಎಣ್ಣೆಯನ್ನು ಸುರಿಸಿ ತುಂಬಿದ್ದ ಮದ್ದನ್ನೆಲ್ಲಾ ನಿರ್ಜೀವವಾಗಿ ಮಾಡಿಟ್ಟಿದ್ದರು. ಈ ಮದ್ದಿನ ಮನೆಗಳು ಈಗ ಬಾವಲಿ ಹಕ್ಕಿಗಳಿಗೆ ನಿವಾಸಸ್ಥಾನಗಳಾಗಿರುವುವು.

೧೨ ಮೀರಸಾದಕ=ಇವನು ಯುದ್ಧ ಕಾಲದಲ್ಲಿ ಟೀಪುಸುಲ್ತಾನನಿಗೆ ಹಸರು ಛತ್ರಿಯನ್ನು ಹಿಡಿಸಿ ನಮಸ್ಕಾರ ಮಾಡುವವನಂತೆ ನಟಿಸಿ ಟೀಪುಸುಲ್ತಾನನನ್ನು ಕೊಲ್ಲಿಸಿದನು. ಈ ಮೀರಸಾದಕನ ಗೋರಿಗೆ ಉಗುಳಿ ಈಗಲೂ ಅವರ ಜನಗಳು ಪಾದರಕ್ಷೆಗಳಿಂದಲೂ ಮತ್ತು ಕಲ್ಲುಗಳಿಂದಲೂ ಪೂಜೆಮಾಡಿ ಹೋಗುತ್ತಿರುವರು.

೧೩ ಮೈಸೂರು ಹುಲಿ=ಟೀಪುಸುಲ್ತಾನನ ಅನ್ವರ್ಥನಾಮವು. ಹುಲಿಯು ಪೂರ್ವಾಪರ ಯೋಚನೆಯಿಲ್ಲದೆ ಬಲೆಗೆ ಸಿಕ್ಕಿ ಸಾಯುವತೆರ ಸುಲ್ತಾನನು ಸತ್ತನೆಂದು ಊಹಿಸಿ ಆ ಹೆಸರನ್ನು ಅವನಿಗೆ ಬ್ರಿಟೀಷರೇ ಕೊಟ್ಟಿದ್ದರು.

೧೪ ಟೀಪುಸುಲ್ತಾನನು ಮಡಿದುದು=ಹುಲ್ಲೇಬಾಗಿಲ ಬಳಿಯಲ್ಲಿ.

೧೫ ಕೊನೆ ವಿಧಿ ಗುಮ್ಮಜ್‌ನಲ್ಲಿ ನಡೆಯಿತು=ಇದು ಗಂಜಾಮಕ್ಕೆ ಸ್ವಲ್ಪ ದೂರದಲ್ಲಿದೆ. ಇಲ್ಲಿ ಹೈದರ್, ಹೈದರ್ ಧರ್ಮಪತ್ನಿ ಮತ್ತು ಟೀಪುಸುಲ್ತಾನನ ಗೋರಿ ಇದರಲ್ಲಿದೆ. ಇದಲ್ಲದೆ ಇವರ ಸಂಬಂಧಿಗಳ ಗೋರಿಗಳು ಸಹ ಇವೆ.

೧೬ ಏಮಲ ದೇಶಗಳು = ಎಂಟು ಡಿಸ್ಟ್ರಿಕ್ಟುಗಳು.

೧೭ ಮಹಿಶೂರ=ಮಾದರೀ ಸಂಸ್ಥಾನವೆನಿಸಿದ ಮೈಸೂರು ಪಟ್ಟಣ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಾದ ನಾಲ್ವಡಿ ಕೃಷ್ಣರಾಜರಿಂದ ಗೋಕುಲದಂತೆ ಪರಿಣಮಿಸಿರುವುದು.

* * *

# ೨. ಝಾನ್ಸಿರಾಣಿ ಲಕ್ಷ್ಮೀಬಾಯಿ

ಭಾರತೀಯ ಸ್ವಾತಂತ್ರ್ಯ ರಣಾಗ್ರಣಿ ಸಿಂಹಿಣಿ ಝಾನ್ಸಿಯರಾಣಿಯನು
ಗೌರವಗೊಳಿಸಿರಿ ಬ್ರಾಹ್ಮಣಕುಲಮಣಿ ಕ್ಷತ್ರಿಣಿ ಲಕ್ಷ್ಮೀಬಾಯಿಯಿಯನು ॥

೧

ಸೇತು ಹಿಮಾಲಯ ಧಾತ್ರಿಗೆ ಮಧ್ಯದ ಬುಂದೇಲ್‌ಖಂಡ ಪ್ರದೇಶದಲಿ
ಭೀತಿಯುಳಿದ ಸಂತೋಷ ಸ್ವತಂತ್ರದ ಝಾನ್ಸಿಸಿರಿಯ ಸಂಸ್ಥಾನದಲಿ ॥
ಭೂತದಯಾಪರ ಪೂನೆಯಪೇಷ್ವೇ ಬಾಜೀರಾಯನ ಕರುಣದಲಿ
ಖ್ಯಾತಿಪಡೆದ ರಘುನಾಥ ಹರೀನೇವಾಳಕರನ ಸದ್ವಂಶದಲಿ ॥
ನೀತಿನಿರತ ಪ್ರಭುವೆನಿಸಿದ ಗಂಗಾಧರರಾವ್ ಪತ್ನಿಸಮೇತದಲಿ
ಘಾತಕತನದೊಳು ಹಿಂದಿ ರಾಜ್ಯಗಳ ಗೆದ್ದ ಬ್ರಿಟೀಷರ ನೆಳಲಿನಲಿ ॥
ಸ್ವಾತಂತ್ರ್ಯದ ಸುಖದಾನಂದದಿ ತನ್ ಪ್ರಜೆಗಳ ಕ್ಷೇಮದೊಳಿರಿಸುತಲಿ
ಪಾತಕವಳಿಸುವ ಕೌತುಕಮಾರ್ಗದಿ ರಾಜ್ಯವಾಳುತಿಹ ಸಮಯದಲಿ ॥

**ದೊಡ್ಡುಡಾನ್**

ಮರಾಟಪೇಷ್ವೆ ಎರಡನೆ ಬಾಜೀರಾಯನು ಬ್ರಹ್ಮಾವರ್ತದಲಿ
ವಿರಾಟಧ್ಯಾನದೊಳಿದ್ದನಾಗ ವಿಶ್ರಾಂತಿ ವೇತನವ ಪಡೆಯುತಲಿ ॥
ಕಿರೀಟಪ್ರಾಯನು ಮೋರೋಪಂತನೆಂಬೋರ್ವ ಸುಪುತ್ರ ಸಮೇತದಲಿ
ಭರಾಟ ಆಶ್ರಯಪಡೆದಿದ್ದನು ಆ ಮರಾಟ ಪೇಷ್ವೆ ಸಮೀಪದಲಿ ॥

**ಚಿಕ್ಕುಡಾನ್**

ಈ ಪಂತನ ಪುತ್ರಿಯೆ, ಝಾನ್ಸಿ ರಾಣಿಯಾದವಳು
ಈ ಪುತ್ರಿ ಪೆಸರು ಮನುಬಾಯಿಯೆಂದು ಮೊದಲಿನೊಳು ॥

ಈ ಫಲಪ್ರದೆಯ ಗುರು ನಾರಾರಾಯ ಪೇಷ್ವೆಗಳು
ಈ ಪೆಣ್ಣನೆ ವರಿಸಿದ ಝಾನ್ಸಿದೊರೆಯು ವಿಭವದೊಳು ॥

**ಶ್ಲೋಕ**

ಮದುವೆಯಾದೊಂಬತ್ತು ವರುಷಕೆ ಪುತ್ರ ರತ್ನವು ಜನಿಸಿತು
ಆದರದು ಬರಿ ಮೂರು ಮಾಸದಿ ಮೃತ್ಯು ಸನ್ನಿಧಿ ಸೇರಿತು ।

**ಚಾಲ್**

ದೊರೆ ಗಂಗಾಧರರಾಯನು ಪುತ್ರವಿಯೋಗವ ತಡೆಯದೆ ತಾನಿನ್ನು
ಮರಣಿಸಬಹುದೆಂದನುಮಾನಿಸಿ ತನ್ ರಾಜ್ಯವ್ಯವಸ್ಥೆಗೆ ತೊಡಗಿದನು ॥

೨

ಒಂದು ಸಾವಿರದ ಎಂಟ್ನೂರೈವತ್ಮೂರು ನವೆಂಬರ್ ಮಾಸದಲಿ
ಮುಂದಿನ ರಾಜ್ಯವ್ಯವಸ್ಥೆಗೆ ತಕ್ಷಣ ಝಾನ್ಸಿಯ ದರ್ಬಾರ್ ಸೇರ್ರುತಲಿ ॥
ಬುಂದೇಲ್ಖಂಡದ ಪೊಲಟಿಕಲಸಿಸ್ಟಂಟ್ ಮೇಜರ್ ಎಲ್ಲೀಸ್ ಸನ್ನಿಧಿಲಿ
ಒಂದಿಗೆಯಿದ್ದಾ ಸೈನ್ಯಾಧಿಕಾರಿ ಕ್ಯಾಪ್ಟನ್, ಮಾರ್ಟಿನ್ ಯೆದುರಿನಲಿ ।
ಚಂದದಿ ತನ್ಮನದಾಶೋತ್ತರವನು ರಾಣಿ ಸಮೇತದಿ ತಿಳಿಸುತಲಿ
ಹಿಂದೂಧರ್ಮಪ್ರಕಾರದಿ ಪಡೆದನು ದತ್ತೂ ಪುತ್ರನ ನಿಯಮದಲಿ ॥
ಅಂದು ದತ್ತು ಸ್ವೀಕಾರದ ಸನದನು ಬರೆಯಿಸಿ ಎಲ್ಲೀಸ್ ಹಸ್ತದಲಿ
ಸಂದೇಹಗೊಳ್ಳದೆ ಒಪ್ಪಿಸಿಕೊಟ್ಟನು ರಾಜನು ಸರ್ವರ ಸಮುಖದಲಿ ॥

**ದೊಡ್ಡುಡಾನ್**

ಮರುಕ್ಷಣದಲ್ಲಿಯೆ ರಾಜನು ಸಲಿಸಿದ ಸನದ್ದು ಗೌರ್ನರ್ ಜನರಲ್‌ಗೆ
ಸೇರಿತು ಝಾನ್ಸಿಯ ಪೊಲಟಿಕಲೇಜೆಂಟ್ ಮಾಲ್ಕಾಂ ಮೂಲಕ ವಿಷದಂಗೆ ॥
ದುರುಳತೆಗರಿಯದೆ ಗಂಗಾಧರರಾವ್ ನಂಬಿ ಬ್ರಿಟೀಷರ ನುಡಿಗಳಿಗೆ
ಮರಣವ ಹೊಂದಿದ ಡಿಸೆಂಬರ್ ಇಪ್ಪತ್ತೊಂದನೆ ತೇದೀ ಹಗಲೊಳಗೆ ॥

### ಚಿಕ್ಕುಡಾನ್

ಪ್ರೇತಾಂತ್ಯವಿಧಿಯ ಮರುಕ್ಷಣವೆ ರಾಜಗೃಹದಲಿ
ಆತುರದೊಳು ಎಲ್ಲೀಸ್, ಮಾರ್ಟಿನ್ ಕಾರ್ಯದಕ್ಷತೆಲಿ ॥
ಅತಿಶಯದ ಖಜಾನೆಗೆ ಬೀಗಮುದ್ರೆಗೊಳಿಸುತಲಿ
ನೂತನದ ವ್ಯವಸ್ಥೆಯ ತಂದರಲ್ಲಿ ರಾಜ್ಯದಲಿ ॥

### ಶ್ಲೋಕ

ಇಂತು ತನ್ನೆದುರಾದುದರಿಯುತ ಝಾನ್ಸಿ ರಾಣಿಯು ಹೃದಯದ
ಚಿಂತೆಯಿಂದಿರುವಂಥಕಾಲದಿ ಗೌರ್ನರ್ ಜನರಲ್ ಕಳುಹಿದ ॥

### ಚಾಲ್

ಔರಸಪುತ್ರನು ಇಲ್ಲದ ಕಾರಣ ಬ್ರಿಟೀಷ್ ಸಾಮ್ರಾಜ್ಯಕೆ ಝಾನ್ಸಿಯನು
ಸೇರಿಸಿಕೊಂಡಿಹುದೆಂಬ ಆಜ್ಞೆಯನು ರಾಣಿಗೆ ಇತ್ತನು ಎಲ್ಲೀಸನು ॥

೩

ಇದುವೆಪ್ರಕಾರದ ಆಜ್ಞೆಯನಂತರ-ರಾಣಿಯು ಪುನರಪಿ ಮನವಿಯಲಿ
ಮೊದಲಿಗೆ ಜರುಗಿದ ರಾಜ್ಯಸಂಬಂಧದ ತಹನಾಮೆಯ ಕಥೆ ತಿಳಿಸುತಲಿ ॥
ಬಧಿರಹೃದಯದಾ ಲಾರ್ಡ್‌ಡಾಲ್‌ಹೌಸಿಗೆ ಪ್ರಾರ್ಥಿಸಿಕೊಂಡಳು ವಿನಯದಲಿ
ಆದರೆ ರಾಣಿಯ ಪ್ರಾರ್ಥನೆ ಕೊನೆಯೊಳು ಬೂದಿಹೋಮದಂತಾಯ್ತು ಬಲಿ॥
ಅದುವೆ ಸಮಯದೊಳು ಲಾರ್ಡ್‌ಡಾಲ್ ಹೌಸಿಯು ಹಿಂದೂಸ್ಥಾನದ ಬಹುಕಡೆಲಿ
ಮೊದಲಿನಕಾರಣ ತೋರಿಸಿ ಪಡೆದನು ಬಹುಬಹು ರಾಜ್ಯಂಗಳ ಮೋಸದಲಿ॥
ಮದಿಸಿದ ಬುದ್ಧಿಯ-ಲಾರ್ಡ್‌ಡಾಲ್‌ಹೌಸಿಯ ದೌರ್ಜನ್ಯದ ದುರ್ಘಟನೆಯಲಿ
ಉದಿಸಿತು ದ್ವೇಷವು ರಾಷ್ಟ್ರಾದ್ಯಂತವು ಬ್ರಿಟೀಷ್ ಸರ್ಕಾರದ ವಿಷಯದಲಿ ॥

### ದೊಡ್ಡುಡಾನ್

ಸಾವಿರದೆಂಟ್ನೂರೈವತ್ತೇಳನೆ ಇಸವಿಯೋಳ್ ಹಿಂದೂಸ್ಥಾನದಲಿ

ಕೇವಲ ದನಗಳ ಹಂದಿಯ ಕೊಬ್ಬನು ಬಳಸಿದ ಮದ್ದಿನ ತೋಟೆಯಲಿ ॥
ತವಕದಿ ಯುದ್ಧದ ಕೆಲಸವ ಸಾಗಿಸಲಪ್ಪಣೆಯಾಗಿದೆ ಯೆಂಬುತಲಿ
ಆವಿರ್ಭವಿಸಿತು ಸುದ್ದಿಯು ಸೈನ್ಯದಿ ಮೊದಲಿಗೆ ಢಂ.ಢಂ. ಊರಿನಲಿ ॥

**ಚಿಕ್ಕುಡಾನ್**

ಇದರಿಂದ ಬ್ರಿಟೀಷರ ಹಿಂದು ಮುಸ್ಲಿಂ ಸೈನ್ಯದಲಿ
ಹದಗೆಟ್ಟ ಪರಿಸ್ಥಿತಿ ಉದಿಸಿತಗ್ನಿ ಜ್ವಾಲೆಯಲಿ ॥
ಮೊದಲಾಯ್ತು ವಿರೋಧವು ಮೀರತ್ ಸೈನ್ಯ ಶಿಬಿರದಲಿ
ತದನಂತರ ಜರುಗಿತು ದೆಹಲಿ ಮತ್ತು ಇತರೆಡೆಲಿ ॥

**ಶ್ಲೋಕ**

ಇದರ ರೀತಿಯೆ ಝಾನ್ಸಿ ಸೈನ್ಯದ ಹವಾಲ್ದಾರ್ ಗುರುಭಕ್ತನು
ಎದುರುಬಿದ್ದು ಬ್ರಿಟೀಷರಾಳ್ವಿಕೆ ಸರ್ವಶಕ್ತಿಯ ಗೆದ್ದನು ॥

**ಚಾಲ್**

ತರುವಾಯದಿ ಬಹು ವಿರೋಧ ಸೈನ್ಯವು ಝಾನ್ಸಿಯೊಳಿದ್ದ ಬ್ರಿಟೀಷರನು
ಸೆರೆಹಿಡಿದೊಯ್ಯುತ ತಪ್ಪುವಾರ್ತೆಯೊಳು ನಂತರ ಕೊಂದಿತು ಸರ್ವರನು ॥

**ಳ**

ದಿಕ್ಕಿಲ್ಲದ ಒಂದೆಣ್ಣು ಜೀವವನು ಅರಮನೆಯಿಂದೊರಗಟ್ಟುತಲಿ
ಲೆಕ್ಕವಿಲ್ಲದಷ್ಟಸುರವೃತ್ತಿಯೊಳು ಪ್ರಜೆಗಳ ಬೇಟೆಯನಾಡುತಲಿ ॥
ಮಕ್ಕಳುಮರಿಗಳು ಸ್ತ್ರೀಯರು ಮುದುಕರುಯೆನ್ನದೆ ಸರ್ವರ ಕೊಲ್ಲುತಲಿ
ಪಕ್ಕೆ ಎಲಬು ತಲೆಬುರಡೆ, ಮೆದಳು, ಎದೆ, ಕರಳು ರಕ್ತವನು ಹರಿಸುತಲಿ ॥
ಸೊಕ್ಕಿನಿಂದ ನಿರ್ದಯದಿ ಬ್ರಿಟೀಷರು ಚಕ್ಕಂದವ ಪಡುತಿರುವಲ್ಲಿ
ದಿಕ್ಕುಕೆಟ್ಟು ಪ್ರತಿಕಾರಕಾಗಿ ಪರಿತಪಿಸುತಿದ್ದ ಜನ ರೋಷದಲಿ ॥

ತಕ್ಕ ಸಮಯವೆಂದ್ಧಸಿದ ತೋಳಗಳ ತೆರದಿ ಬ್ರಿಟೀಷರ ಸೈನ್ಯದಲಿ
ಹೊಕ್ಕು ನಡೆಸಿದರು ಮೊದಲೇಳಿದತೆರ ಆಂಗ್ಲರಜ್ಞವ ಝಾನ್ಸಿಯಲಿ ॥

**ದೊಡ್ಡಡಾನ್**

ಇದನು ಕಂಡು ವಿಧಿಯಿಲ್ಲದೆ ಆಂಗ್ಲರು ನಿರ್ಧನೆ ರಾಣಿಯ ಬಳಿ ಬಂದು
ಪದಕೆ ಬೀಳುವೆವು ನಮ್ಮನುಳಿಸಿ ಮೇಣ್ ನೀವೆ ರಾಜ್ಯವಾಳಿರಿಯೆಂದು ॥
ವಿಧವಿಧಪ್ರಾರ್ಥಿಸಿ ಪಾದಗಳಿಡಿಯಲು ಮೃದುಹೃದಯದರಾಣಿಯು ಅಂದು
ಮೊದಲಿನ ನಂಬಿಕೆ ದ್ರೋಹ ಮರೆತು ಮೊದಲಂತೆ ರಾಜ್ಯಸೂತ್ರವ ಪಿಡಿದು॥

**ಚಿಕ್ಕುಡಾನ್**

ಜನಸಾಮಾನ್ಯ ಶಾಸನದಿ ಝಾನ್ಸಿ ರಾಜ್ಯ ನೆಮ್ಮದಿಯ
ಘನ ಚತುರ ಉಪಾಯದಿ ಉಂಟುಮಾಡಿ ಬಹುಪರಿಯ ॥
ಮನೆಮುರುಕರಾದ ಕೆಲ ಪಿತೂರಿಗಾರರ ನೆಲೆಯ
ಅನುನಯದಿ ಮೆಟ್ಟಿ ಪ್ರಾಮಾಣಿಕತ್ವದಾಳ್ವಿಕೆಯ ॥

**ಶ್ಲೋಕ**

ಪರಮ ಸತ್ಯದೊಳಾಂಗ್ಲ ಪ್ರತಿನಿಧಿಯಾಗಿ ನಡೆಸುತಲಿದ್ದರೂ
ದುರುಳಮನದ ಬ್ರಿಟೀಷರಾಗಲು ಮತ್ತೆ ದ್ರೋಹಕೆಯೆದ್ದರು ॥

**ಜಿ**

ಈ ರಣಕೇಳಿಗೆ ಬಂದಿದ್ದನು ಸರ್ ಹ್ಯೂರೋಜ್ ದಳಪತಿ ರಾಕ್ಷಸನು
ಘೋರ ಪ್ರಭಾವದ ಭಾರಿ ಫಿರಂಗಿಗಳಾರಿಸಿ ಝಾನ್ಸಿಯ ಕೋಟೆಯನು ॥
ಮಾರಣಹೋಮವ ಮಾಡುವ ಸೈನ್ಯವ ನುಗ್ಗಿಸಿ ಕೋಟೆಯ ಒಳಗಿನ್ನು
ದಾರುಣ ದುಃಖದ ರಾಣಿಯ ಸೈನ್ಯದ ರಕ್ತದ ಹೊಳೆಯನು ಹರಿಸಿದನು ॥
ಕಾರಣವರಿಯದ ರಾಣಿಯು ರೋಷದಿ ಪುರುಷವೇಷದೊಳು ಕತ್ತಿಯನು

ಧರಿಸಿ ಹಸ್ತದೊಳು ಏರಿ ಕುದುರೆಯನು ಬೆನ್ನಿಗೆ ದತ್ತುಕುಮಾರನನು ॥
ಭರದಿ ಕಟ್ಟಿಕೊಂಡಾರಿಸಿ ಕುದುರೆಯ ತೂರಿ ಬ್ರಿಟೀಷರ ಸೈನ್ಯವನು
ಮಾರಿಗೆ ಔತಣಮಾಡಿಸಿ ಹೊರಟಳು ಹೆಣಗಳ ದಾಟುತ ಮುಂದಿನ್ನು ॥

**ದೊಡ್ಡುಡಾನ್**

ಸೇರುತ ಕಾಲ್ಪಿಯ ಕಾಣುತ ಪೇಷ್ವೆಯ ತಾಂತ್ಯಾಟೋಪಿಯ ನೆರವಿಯಲಿ
ಸೇರಿಸಿ ಸೈನ್ಯವ ರಾಣಿಯು ಪುನರಪಿ ಹ್ಯೂರೋಜ್ ಸೈನ್ಯ ಸಮುದ್ರದಲಿ ॥
ಹಾರಿಸಿ ಕುದುರೆಯ ಮೃತ್ಯುವಾಗಿ ಆ ಬ್ರಿಟೀಷರಿಗೆ ಕಡಿದಾಕುತಲಿ
ಯಾರಿಗು ಸಿಕ್ಕದೆ ಧೃವಗತಿ ಪಡೆದಳು ಓರ್ವ ತಪಸ್ವಿ ಕುಟೀರದಲಿ ॥

**ಚಿಕ್ಕುಡಾನ್**

ತನ್ನ ಸ್ವಾಮಿನಿಯಾಜ್ಞೆ ಪ್ರಕಾರ ಜತೆಯೊಳಿದ್ದವನು
ಮುನ್ನ ದೇಶಮುಖೀ ರಾಮಚಂದ್ರರಾಯನೆಂಬುವನು ॥
ಸನ್‌ಸಾವಿರದೆಂಟ್ನೂರ್ ಐವತ್ತೆಂಟರೊಳಗಿನ್ನು
ನನ್ನಿಯಿಂದಲಿ ರಾಣಿಯ ಅಂತ್ಯ ವಿಧಿಯ ನಡೆಸಿದನು ॥

**ಶ್ಲೋಕ**

ಅಂದು ನಿಜ ಸ್ವಾತಂತ್ರ್ಯಕೋಸುಗ ನಡೆದ ಯುದ್ಧವು ಇಂದಿಗೆ
ತಂದುಕೊಟ್ಟು ಸ್ವರಾಜ್ಯ ಲಕ್ಷ್ಮಿಯ ಸಲಹುತಿರುವುದು ನಮ್ಮಿಗೆ ॥

**ಚಾಲ್**

ದೊರೆ ಶೇಷನಗಿರಿ ಹರಿ ಪುಟ್ಟಣ್ಣರ–ನಂಜಣ್ಣರ–ನೀಲ್ಕಂಠರನು
ಸ್ಮರಿಸುತ ಝಾನ್ಸಿ ರಣಾಗ್ರಣಿಯ ಲಾವಣಿ ರಚಿಸಿದ ವಿಷಧರನು ॥

* * *

# ೩. ಸ್ವಾತಂತ್ರ್ಯ ವಿರಾಟರು

ಭಾರತದಾ ಸ್ವಾತಂತ್ರ್ಯ ಸಮರ ಸ್ವಾತಂತ್ರ್ಯ ವಿರಾಟರ ವಿಷಯವಿದು
ಭಾರತೀಯ ಸ್ವಾತಂತ್ರ್ಯ ದಿನೋತ್ಸವದಮರ ಸ್ಮರಣೆಯೊಳಗುದಿಸಿಹುದು ॥

೧

ಭಾರತಕ್ಕೆ ಪರದಾಸ್ಯ ಶೃಂಖಲೆಯು ಮೃತ್ಯುವಾದ ಆ ಸಮಯದಲಿ
ಪಾರತಂತ್ರ್ಯ ಶಿರಮೆಟ್ಟಿ ಪೂರ್ಣ ಸ್ವಾತಂತ್ರ್ಯ ಪಡೆಯಬೇಕೆಂಬುತಲಿ ॥
ಭಾರತ ಕಾಂಗ್ರೆಸ್ ಸ್ಥಾಪನೆಕರ್ತರ ಡಾಕ್ಟರ್ ಹ್ಯೂಮರ ಶ್ರೇಣಿಯಲಿ
ವರ ಬಂಗಾಳದ ಬ್ಯಾರಿಸ್ಟರ್ ಶ್ರೀ ಉಮೇಶ್ಚಂದ್ರ ಬ್ಯಾನರ್ಜಿ ಕಲಿ ॥
ಭಾರತ ರಾಷ್ಟ್ರಕೆ ತಾರಕರೂಪದ ಸ್ವರಾಜ್ಯ ಮಂತ್ರವ ತಿಳಿಸುತಲಿ
ಧೀರತೆಯಿಂ ಜನಜಾಗೃತಿಗೊಳಿಸಿದ ದಾದಾಭಾಯ್ ನವರೋಜಿ ಕಲಿ ॥

**ದೊಡ್ಡಡಾನ್**

ಭಾರತಮುಸ್ಲಿಂ ಪೂರ್ಣಸುಧಾರಕ ನ್ಯಾಯಮೂರ್ತಿ ತಯಬ್ಜೀಯವರು
ಭಾರತರಾಷ್ಟ್ರದ ಪ್ರತಿನಿಧಿಸಂಸ್ಥೆಯು ಕಾಂಗ್ರೆಸ್ ಒಂದೇಯೆನಿಸಿದರು ॥
ಭಾರತದುಪ್ಪನು ಉಂಡಿಹೆನೆಂದಾ ಸರ್.ವಿಲಿಯಮ್ ವೆಡರ್ ಬರ್ನ್‌ರವರು
ಮಾರಲೆ ಮಿಂಟೊ ಸುಧಾರಣೆ ದುಷ್ಫಲ ಜಾತಿದ್ವೇಷ ತಡೆಗಟ್ಟಿದರು ॥

**ಚಿಕ್ಕುಡಾನ್**

ಬಂಗಾಳದ ಸಿಂಹ ಸುರೇಂದ್ರನಾಥ ಬ್ಯಾನರ್ಜಿ
ವಂಗ ಭಂಗದ ಚಳುವಳಿ ಬಹಿಷ್ಕಾರದಾ ಭರ್ಜಿ ॥
ಶೃಂಗಾರದ ಬೊಂಬಾಯ್ ಫಿರೋಜಶಹ ಮೇಥಾಜಿ

ತುಂಗವಿಕ್ರಮ ಕಾಂಗ್ರೆಸ್ ಆಧಾರಸ್ಥಂಬರ ಗುರುಜಿ ॥

**ಶ್ಲೋಕ**

ಅರ್ಥಶಾಸ್ತ್ರದಿ ರಾಜಕೀಯದಿ ರಾನಡೇ ಗುರುವಾಕ್ಯದಿ
ಸ್ವಾರ್ಥತ್ಯಾಗದಿ ತಿಲಕ ಸ್ನೇಹದಿ ರಾಷ್ಟ್ರಸೇವೆಯ ಕಾರ್ಯದಿ ॥

**ಚಾಲ್**

ಭಾರತಸೇವೆ ಸಮಾಜ ಸ್ಥಾಪನಾಚಾರ್ಯ ಸೂರ್ಯ ಗೋಖಲೆಯೆಂದು
ಪೂರಸನಾತನ ಭಾರತೀಯರೊಳು ಇಂದಿಗು ಕೀರ್ತಿಯು ಬೆಳಗಿಹುದು ॥

೨

ಶಿಕ್ಷಣಕ್ಷೇತ್ರದಿ ಕಾಶಿಯ ಹಿಂದೂ ವಿಶ್ವವಿದ್ಯಾಲಯ ಸ್ಥಾಪಕರು
ತೀಕ್ಷಣಹೃದಯದ ಸೌಮ್ಯಸುಬುದ್ಧಿಯ ಮದನಮೋಹನ್ಮಾಳ್ವೀಯವರು ॥
ಅಕ್ಷಯಭಾರತ "ಹೋಂ ರೂಲ್ ಚಳುವಳಿ" ಥಿಯಾಸಫೀ ನಿರ್ಮಾಪಕರು
ಕುಕ್ಷಿಯ ಅಂತರರಾಷ್ಟ್ರೀಯ ಸಿಂಹಿಣಿ ಆನಿಬೆಸೆಂಟ್ ಧೀಮಾನ್ವಿತರು ॥
ರಾಕ್ಷಸವೃತ್ತಿ ಬ್ರಿಟೀಷರನ್ಯಾಯದಿ ಮಾಂಡಲೆ ಜೈಲೊಳಗಿದ್ದವರು
ಮೋಕ್ಷದ ಗೀತಾರಹಸ್ಯ ರಚಿಸಿದ ಮರಾಠ ಕೇಸರಿ ತಿಲಕ್ಕರು ॥

**ದುಡ್ಡುಡಾನ್**

ಅನಿರ್ಬಂಧ ಮೇಣ್ ಅನಿರ್ವಚನೀಯತೆ ಸ್ವಾತಂತ್ರ್ಯವು ಬೇಕೆಂದವರು
ಜನಸ್ತೋಮಪ್ರಿಯ ನೆಹರುವರದಿಯಾ ಪಂಡಿತ ಮೋತೀಲಾಲ್ ನೆಹರು ॥
ದಾನವರೂಪಿನ ಸೈಮನ್ ಸಮಿತಿಯ ಬಹಿಷ್ಕರಿಸಿ ತನುಮರೆತವರು
"ಅನ್‌ಹ್ಯಾಪಿಇಂಡಿಯ" ಗ್ರಂಥಕರ್ತ ಶ್ರೀ ಲಾಲಲಜಪತ ರಾಯ್‌ರವರು.

**ಚಿಕ್ಕುಡಾನ್**

ನರಯಜ್ಞವ ನಡೆಸಿದ ರೌಲೆತ್ ಶಾಸನದೆದುರು
ಶಿರಬಾಗದೆ ಶ್ರಮಿಸಿದ ದೆಹಲಿಯ ಅಜಮಲ್‌ಖಾನರು ॥

ಅರವಿಂದರ ಹೊಸಪಥವೆಂದು ಕ್ರಾಂತಿಗೈದವರು
ವರದೇಶಬಂಧು ಶ್ರೀ ಚಿತ್ತರಂಜನ್ ದಾಸ್‌ರವರು ॥

**ಶ್ಲೋಕ**

ವಿಶ್ವವ್ಯಾಪ್ತಿ ಅಹಿಂಸೆದೀಪ್ತಿ ಸ್ವರಾಜ್ಯ ಪ್ರಾಪ್ತಿ ಪ್ರದೀಪರು
ವಿಶ್ವಪ್ರೇಮ ಸ್ವಶಕ್ತಿಸೋಮ ಮಹಾತ್ಮಗಾಂಧಿ ಹುತಾತ್ಮರು ॥

**ಚಾಲ್**

ನಿರಾಸೆಯಂಥ ಭಯಂಕರ ಪಾಪವು ಬೇರೊಂದಿಲ್ಲವೆಂದುಸುರಿದುದು
ಭಾರತಕೋಕಿಲೆ ಶೀಲೆಸರೋಜಿನಿದೇವಿ ಮಧುರವಾಣಿಯಾಗಿಹುದು ॥

೩

ಜಾತೀಯತೆ ನಮ್ ರಾಷ್ಟ್ರೀಯತ್ವದ ವಿರೋಧಗ್ರಹವೆಂದೊರೆದವರು
ಅತಿಶಯಗಾಂಧಿಯ ಬಲಭುಜ ಡಾಕ್ಟರ್ ಅನ್ಸಾರಿ ಉಜ್ವಲ ರಾಷ್ಟ್ರೀಯರು ॥
ಖ್ಯಾತಿಯ ನವಮನ್ವಂತರ ಗಾಂಧಿಯ ನೀತಿಯ ಚೇಷ್ಟೆಯಗೈದವರು
ನೂತನಭಾರತ ಸಂಧಾನಚತುರಾ ವಲ್ಲಭಬಾಯಿಪಟೇಲ್‌ರವರು
ಪ್ರೀತಿಯೊಳೆಮ್ಮಯರಕ್ತದಿ ಭಾರತಚರಿತೆಯ ಬರೆವೆವುಯೆಂದವರು
ಭೀತಿರಹಿತ ಆದರ್ಶನಾರಿಮಣಿ ನೀಲಿಸೇನ ಗುಪ್ತಾಂಕಿತರು ॥

**ದೊಡ್ಡುಡಾನ್**

ಭಾರತ ಬಂಧವಿಮೋಚನೆಗೋಸುಗ ಯುದ್ಧವಮಾಡಿದ ಸದೃಢರು
ಭಾರಿ ಅಜಾದ್‌ಹಿಂದ್ ಸರ್ಕಾರ ರಚಿಸಿದ ನೇತಾಜಿಬಿರುದಿನ ಬೋಸ್‌ರವರು॥
ಭೂರಿಪ್ರತಾಪದ "ಮಾಣಿಕ್‌ತಲಾವದ" ಗುಪ್ತಕಾರಸ್ಥಾನೋಜ್ವಲರು
ಭಾರತದಾ ಪುದುಚೇರಿ "ಮಹರ್ಷಿ ಅರವಿಂದಘೋಷ್" ಸಂಪೂಜಿತರು ॥

**ಚಿಕ್ಕುಡಾನ್**

ಡೆಲ್ಲಿಯೊಳಗೆ ಬಾಂಬಿನಾಸ್ಫೋಟ ನಡೆಸಿದಂಥವರು
ಗಲ್ಲಿಗೇರ್ದ ಭಗತ್‌ಸಿಂಗ್, ರಾಜಗುರುವು, ಶುಕದೇವ್‌ರು ॥
ಸೊಲ್ಲಾಪುರದಿ ಗಲ್ಲಿನಾಪಶುಗಳಾಗಿ ಮಡಿದವರು
ಮಲ್ಲಪ್ಪ ಧೀರಧನಶೆಟ್ಟಿಯು ಮುಂತಾದವರು ॥

**ಶ್ಲೋಕ**

ಇವರ ತೆರ ಸ್ವಾತಂತ್ರ್ಯ ಸ್ಫೂರ್ಯರ ಚರಿತೆ ಬೇಕಾದಷ್ಟಿದೆ
ಅವರು ಗಳಿಸಿದುದನ್ನು ನಾವ್ಗಳು ಉಳಿಸಿಕೊಳ್ವುದು ಸತ್ಯದೆ ॥

**ಚಾಲ್**

ಮೊರೆಶೇಷಗಿರಿಹರಿ ಪುಟ್ಟಣ್ಣರ ಗುರುನಂಜಣ್ಣರ ಕೃಪೆಪಡೆದು
ಭಾರತೀಯ ಸ್ವಾತಂತ್ರ್ಯದಿನೋತ್ಸವಕೀ ಪದ ವಿಷಧರ ರಚಿಸಿದುದು ॥

## ೪. ನಿಷ್ಕಾಮ ಕರ್ಮಯೋಗಿ ಮಹಾತ್ಮ ಗಾಂಧಿಜಿ

**ಧಾಟಿ : ಖಡೀಚಾಲ್**

ದೇವರ ದೇವನ ಭಾರತ ಮಾತೆಯ ಜೀವಾತ್ಮನೆ ಶ್ರೀ ಗಾಂಧೀಜಿಯೇ
ಶ್ರೀವಧುವಿನ ಸಾಮ್ರಾಜ್ಯದ ಶಿಖರದಲಿ ಮಂಡಿಸಿದೆಯ ನೀ ಬಾಪುಜಿಯೇ॥

೧

ಪುದ್ಧ ಅಹಿಂಸೆಯ ಬುದ್ಧನನಂತರ ಪ್ರಬುದ್ಧಭಾರತ ಖಂಡದಲಿ
ಯುದ್ಧಪ್ರಸಿದ್ಧರ ಕಾಥೇವಾಡದ ಪೋರ್‌ಬಂದರ್ ಯೆಂಬೂರಿನಲಿ ॥
ವೃದ್ಧಭಾರತದ ನಿಷಿದ್ಧದಾಸ್ಯದ ಶ್ರಾದ್ಧಮಾಡಿ ತರುವಾಯದಲಿ

ಉದ್ಧರಿಸುವೆ ನಾನನಾದಿಪದ್ಧತಿಗೆಂಬುತ ಬುದ್ಧನ ಮಾರ್ಗದಲಿ ॥
ಬುದ್ಧಿ ಪರಾಕ್ರಮಿ ಕಬಾಗಾಂಧಿ ಸದ್ಧರ್ಮ ಸನಾತನಿಗರ್ಭದಲಿ
ಶ್ರದ್ಧೆಸಮನಿತ್ವ ನೂತನಬುದ್ಧನು ಯೆನಿಸಿದ ಗಾಂಧಿಯು ಜನಿಸುತಲಿ ॥

**ದೊಡ್ಡುಡಾನ್**

ಕಳೆಯುತ ಬಾಲ್ಯವ ಬೆಳೆಯುತ ವಿದ್ಯದ ಕೈಪಿಡಿ ಸವಿನುಡಿ ಬೆಳಕಿನಲಿ
ಬೆಳಗುವ ಯೌವನ ಮೊಳೆಯುವ ಮುಂಚೆಯೆ ಮಾತಾ ಪಿತರಾಕಾಂಕ್ಷೆಯಲಿ॥
ಇಳೆಯೊಳು ವನಿತಾ ಸೌಭಾಗ್ಯಶರದಿ ಕಸ್ತೂರಬಾ ಕರ ಪಿಡಿಯುತಲಿ
ತಳೆದು ಬ್ಯಾರಿಸ್ಟರ್ ಪದವಿಯ ಲಂಡನ್ ವಿಶ್ವವಿದ್ಯಾಲಯ ನೆಳಲಿನಲಿ ॥

**ಶ್ಲೋಕ**

ಮದ್ಯ ಮಾಂಸ ಪರಾಂಗನೇಯರ ಸಂಗ ವರ್ಜಿತ ಕ್ಷೇತ್ರದಿ
ಉದ್ಯಮಿ ವಿದ್ಯಾರ್ಥಿಯಾಗುತ ಮಾತೆಯಾಶೀರ್ವಾದದಿ ॥

**ಚಾಲುಡಾನ್**

ಭಾರತೀಯ ಮೇಣ್ ಬ್ರಿಟೀಷ್ ಸಂಸ್ಕೃತಿಯ ಅನಂತ ಅನುಭವ ಪಡೆಯುತಲಿ
ದೊರೆತನ ಮತ್ತು ಗುಲಾಮ್ತನವರಿಯುತ ರಾಜಕೀಯವನು ಬೆಳೆಸುತಲಿ ॥
ಚಿರಸ್ಥಾಯಿ ಸ್ವಾತಂತ್ರ್ಯ ಸೂರ್ಯಪ್ರಭೆ ಪ್ರಪಂಚ ಬೆಳಗಲಿಯೆನ್ನುತಲಿ
ಭಾರತ ಸೇವಕ ಆವಿಷ್ಕರ್ತನು ಕಾಲಪುರುಷನೆಂದೆನಿಸುತಲಿ ॥

**ಚಿಕ್ಕುಡಾನ್**

ನವರೋಜಿ ಸುಧಾರಣೆ ಕಾಂಗ್ರೆಸ್ ವೃಕ್ಷವನು ಕೆತ್ತಿ
ನವ ಲೋಕಮಾನ್ಯ ಶ್ರೀತಿಲಕ ಧರ್ಮ ಶಿರವೆತ್ತಿ ॥
ನವ ಭಾರತದಾಧ್ಯಾತ್ಮಿಕದ ಗೀತೆ ಪೆಸರೆತ್ತಿ
ನವನಿಧಿಗಳ ಇಂಗ್ಲೆಂಡ್ ರಾಜಸಿರಿಯ ಕಡೆಗೊತ್ತಿ ॥

**ಗುಲ್ಲುಡಾನ್**

ಮಧುವಿನಾಸ್ವಾದ ಮಡುವಿನಂತೆ
ವಧುವಿನೆಳೆ ಯೌವನ ಸಿರಿಯಂತೆ
ಸುಧೆಯ ಸೌಂದರ್ಯ ಶರಧಿಯಂತೆ
ಖಾದಿ ತವರುಮನೆ ಸ್ವತಂತ್ರಭಾರತ ಖಂಡವೆನ್ನುವಂತೆ ॥

**ಶ್ಲೋಕ**

ಅಸಹಕಾರ ಅಹಿಂಸೆ ಶಕ್ತಿ ಅಭಿನ್ನ ಜೀವನ ಪಥದಲಿ
ವಿಸರ ಮುಕ್ತ ಪ್ರಸಕ್ತ ಬುದ್ಧನೆ ಜಗವ ಸಲಹಿದೆ ಶ್ರಮದಲಿ ॥

**ಚಾಲ್**

ದೇವಕಿತನಯನ ನಿಷ್ಕಾಮತ್ವದ ರಾಜಯೋಗಿ ಶ್ರೀ ಗಾಂಧಿಜಿಯೇ
ಶ್ರೀವಧುವಿನ ಸಾಮ್ರಾಜ್ಯಶಿಖರದಲಿ ಮಂಡಿಸಿದೆಯ ನೀ ಬಾಪೂಜಿಯೆ ॥

೩

ಈತೆರ ಶಾಂತೀವಾದ ಭವಿಷ್ಯದ ಈಶ್ವರ ಹುಚ್ಚನು ಅನವರತ
ಭೂತದಯಾಪರನೆನ್ನಿಸಿ ದಕ್ಷಿಣ ಆಫ್ರಿಕ ಹಿಂದೀ ಜನಕೆನುತ ॥
ಜಾತಿ ಮತಾಂತರ ಭೂತವನೋಡಿಸಿ ಹಕ್ಕುಬಾಧ್ಯತೆಯ ನಿರ್ಮಿಸುತ
ನೀತಿಪಥವನಪರೋಕ್ಷದಿ ಮೆಟ್ಟುತ ಭಾರತ ಕಾಂಗ್ರೆಸ್ ಬೆಳಗಿಸುತ ॥
ಖ್ಯಾತಿಯಾಂತ ಜನರೊಂದಿಗೆ ಲಂಡನ್ ಚಕ್ರಗೋಷ್ಠಿಯೊಳು ರಂಜಿಸುತ
ಪ್ರೀತಿಯ ಇಂಗ್ಲೆಂಡ್ ಸಾಮ್ರಾಟ್ ಪ್ರಾರ್ಥನೆ ದೃಢವಿಶ್ವಾಸಕೆ ಮನಗೊಡುತ ॥

**ದೊಡ್ಡುಡಾನ್**

ಲೋಕಹಿತಾರ್ಪಿತ ಪ್ರಾಣಪ್ರದೀಪನು ವಾರ್ಧಾಶ್ರಮದೊಳು ನೆಲೆಸುತಲಿ
ಸಕಲ ಕಲಾನಿಧಿ ಸತ್ಯಾಗ್ರಹ ಮೇಣ್ ರಚನಾತ್ಮಕ ಸತ್ಕಾರ್ಯದಲಿ ॥

ಲೌಕೀಕದಿ ಹರಿಜನರುದ್ಧಾರದ ಸರ್ವಸಮತ್ವವ ಬೆಳೆಸುತಲಿ
ಸಕಲರ ಆರ್ಥಿಕ ದುಃಸ್ಥಿತಿದೂಡುವ ಚರಕಾ ಸಂಘವನಿರಿಸುತಲಿ ॥

**ಶ್ಲೋಕ**

ವರುಷ ವರುಷಕು ಪ್ರಗತಿಪೊಂದುವ ಯೋಗಯುಕ್ತ ಸ್ವಭಾವದಿ ।
ಹರುಷಗೊಳ್ಳುವ ಸತ್ಯಶೋಧನೆ ಕಾರ್ಯಸುಧೆಯಾಸ್ವಾದದಿ ॥

**ಚಾಲುಡಾನ್**

ಭುವನದಿ ದೈಹಿಕ ನಿರುತ ಮಾನಸಿಕ ಚೈತನ್ಯ ಬೆಳೆಸಲು ಗಾಂಧಿಜಿಯು
ಜೀವನಪಥದೊಳು ಸುಖವು ಮತ್ತು ಸೊಬಗುದಿಸುವಂತೆ ಸದ್ಗುಣನಿಧಿಯು ॥
ಅವಿಶ್ರಾಂತವೂ ಹಗಲಿರುಳೆನ್ನದೆ ಸರ್ವಮಾರ್ಗದೊಳು ಮನು ಮುನಿಯು
ಮುವತ್ತೆಂಟು ಸಂವತ್ಸರ ದುಡಿದೂ ಬಾಳಿದ ಭಾರತ ಭೂಪತಿಯು ॥

**ಚಿಕ್ಕುಡಾನ್**

ಅದಕೋಸುಗ ಭಾರತ ಪ್ರಜೆಗಳಾದ ನಾವುಗಳು
ವೇದಾಂತ ವೇದ್ಯನೆಂದೆನಿಸಿದವನ ಚರಣದೊಳು ॥
ಹೃದಯಾರವಿಂದದೊಡನಿರಿಸಿ ಶಿರವ ಪ್ರೇಮದೊಳು
ಆದರದ ಕೃತಜ್ಞತೆ ಸಲಿಸಿ ಗಾಂಧಿ ಭಕ್ತಿಯೊಳು ॥

**ಗುಲ್ಲುಡಾನ್**

ಬೃಹದ್ ಹಿಂದೀಯರೆಂದರಿಳೆಯ
ಮಹಾ ಮಹಿಮೋನ್ನತರೊಂದನೆಯ
ಮೋಹಿಸುತ ಅರ್ಪಿಸುತಿಹ ಪರಿಯ
ಅಹಿಪತಿ ಪೊಗಳಲು ಅಸದಳವೆನ್ನುವ ಮಹಿಮ ಗಾಂಧಿ ಸಿರಿಯ ॥

**ಶ್ಲೋಕ**

ಕೋಟಿ ಚಂದ್ರಾದಿತ್ಯ ಕಿರಣದ ಪರಂಜ್ಯೋತಿ ಸ್ವರೂಪಗೆ
ಸಾಟಿಯಾರ್ ನವಖಂಡ ಪೃಥ್ವಿಲಿ ಗಾಂಧಿಜಿಯ ನಿಜಪೆರ್ಮೆಗೆ ॥

**ಚಾಲ್**

ದೇವರ ಮಗ ಆ ಕ್ರಿಸ್ತನ ಆಹುತಿ ಧರ್ಮದಿ ಬೆಳಗಿದ ಗಾಂಧಿಜಿಯೇ
ಶ್ರೀವಧುವಿನ ಸಾಮ್ರಾಜ್ಯ ಶಿಖರದಲಿ ಮಂಡಿಸಿದೆಯ ನೀ ಬಾಪುಜಿಯೇ ॥
ಪ್ರಗತಿಯಪೊಂದಿದ ಭುವನ ಬ್ರಹ್ಮಾಂಡದಿ ಭಾರತಕೀರ್ತಿಯ ಮೆರೆಸುತಲಿ
ಸಾಗರದಾಚೆನ ಪ್ರಪಂಚ ಸುತ್ತುತ ಭಾರತ ರಾಷ್ಟ್ರದ ಧ್ವಜದಡಿಲಿ ॥
ಆಗಮಕೋಟಿ ಪ್ರಚಾರಿತ ಸಂಸ್ಕೃತ ದೇವಭಾಷೆ ಪುಣ್ಯ ಭೂಮಿಯಲಿ
ರಾಗದ್ವೇಷ ರಹಿತಾಮಳ ಹಿಂದೀ ಗಾಂಧಿ ಕುಲೋದ್ಭವ ಬಾಳುತಲಿ ॥
ಹೀಗಿರುವಾಗಲೇ ಶಾಂತಿಸ್ಥಾಪನೆಗೆ ದೆಹಲೀ ನಗರವ ಸೇರುತಲಿ
ತ್ಯಾಗ ಶಿಖಾಮಣಿ ಕಾರ್ಯಗೌರವದಿ ಯಿರುತಿರೆ ಬಿರ್ಲಾ ಭವನದಲಿ ॥

**ದೊಡ್ಡುಡಾನ್**

ಅಷ್ಟರೊಳುದಿಸಿತು ಮರಣದಸೂಚನೆ ಪ್ರಾರ್ಥನೆಗೊರಡುವ ಸಮಯದಲಿ
ದುಷ್ಟ ಗೋಡ್ಸೆ ಗುಂಡೊಡೆಯಲು ತಕ್ಷಣ ಪ್ರಾಣವು ಮೌನ ಸಮಾಧಿಯಲಿ ॥
ಸೃಷ್ಟಿಗೊಡೆಯ ರಾಮಧ್ಯಾನವ ಮಾಡಿಸಿ ನಿರಾಕಾರನಡಿದಾವರೆಲಿ
ನಿಷ್ಠೆಯಿಂದ ಸಂತುಷ್ಟಿಯೊಳಿರಿಸಿತು ಮಹಾತ್ಮಗಾಂಧಿಯ ಕುಶಲತೆಲಿ ॥

**ಶ್ಲೋಕ**

ಪರಮ ಬೋಸರ ಸ್ಮರಣೆ ಮಾತ್ರದಿ ಮರಗುತಿಹ ಭರತಾಂಬೆಗೆ
ಮರಳಿ ವೊದಗಿತು ಗಾಂಧಿ ಮಹಿಮನ ಮರಣವಾರ್ತೆಯು ಬಗೆಬಗೆ.

**ಚಾಲುಡಾನ್**

ಇಂಥ ಮರಣ ಸಂಭವಿಸಲು ಗಾಂಧಿಗೆ ಕೊರಗಿ ಮಂತ್ರಿ ಅಧಿಕಾರಿಗಳು

ಅಂತರಂಗ ಬಹಿರಂಗ ಭಾವದೊಳು ವಿಧಿಯ ನಿಷೇಧಿಸೆ ವ್ಯಸನದೊಳು ॥
ನಂತರವೈಸ್ರಾಯ್ ಗಾಂಧಿಯ ಮರಣದವಾರ್ತೆಯ ಕೇಳುತ ದುಃಖದೊಳು
ಎಂಥ ಮರಣವಿದು ಓ ಗಾಡ್‌ಯೆನ್ನುತ ಬಂದು ಸುರಿಸೆ ಜಲ ನೇತ್ರದೊಳು॥

**ಚಿಕ್ಕುಡಾನ್**

ಕೈರಾಟೆಯ ಭೃಂಗನು ಕಾಮಿಕ ಶೃಂಗನು ಗಾಂಧಿ
ಸ್ಥಿರಚಿತ್ತಸಾರಂಗನು ಕೇಳಿಯನಂಗನು ಗಾಂಧಿ ॥
ಧರೆ ವಿಜಯ ಪ್ರಸಂಗನು ವಿದ್ಯಾತರಂಗನು ಗಾಂಧಿ
ಸಿರಿ ಭಾರತ ತುಂಗನು ಅನೀತಿ ಭಂಗನು ಗಾಂಧಿ ॥

**ಗುಲ್ಲುಡಾನ್**

ಕೊಟ್ಟನೇ ಮೃತ್ಯುವಿಗಭಯವನು
ಬಿಟ್ಟನೇ ಜಗದಭಿಮಾನವನು ॥
ತೊಟ್ಟನೇ ಕೈವಲ್ಯದಂಗಿಯನು
ಕೆಟ್ಟವೆ ಅಕಟಕಟೆನ್ನುವ ಪ್ರಜೆಗಳು ರೋದಿಪ ಪರಿಗಳನು ॥

**ಶ್ಲೋಕ**

ಬರೆದು ವರ್ಣಿಸಲಾಗದವಮಮಾ ಲೇಖಕನಿಗರಿವಪ್ಪುದೇ
ಪರಮ ಪಿತನನು ಕಳೆದುಕೊಂಡಿಹ ತರಳರಿಗೆ ಅದು ತಿಳಿದಿದೆ ॥

**ಚಾಲ್**

ಜೀವಹಿಂಸೆ ಅನ್ಯಾಯವೆಂದುಸಿರಿದ ಪೈಗಂಬರ್ ತತ್ವದ ಗಾಂಧಿಜಿಯೆ
ಶ್ರೀ ವಧುವಿನ ಸಾಮ್ರಾಜ್ಯಶಿಖರದೊಳು ಮಂಡಿಸಿದೆಯ ನೀ ಬಾಪುಜಿಯೆ॥
ಕೋಮಲಹೃದಯದ ನೆಹರೂ ದುಃಖವ ಸತಿ ಮೌಂಟ್‌ಬ್ಯಾಟನ್ ಕೇಳುತಲಿ
ಕಾಮಿತಾರ್ಥ ಫಲದಾಯಕ ನೆಹರೂ ಮನದಿ ಧೈರ್ಯವಿಡಿರೆನ್ನುತಲಿ ॥

ವಿಮಲ ಸತ್ಯಮೇವೋದ್ಧರಾಮ್ಯಹಂ ಬಿರುದಿನ ನೃಪರಿಳೆಯಾಳುತಲಿ
ಕ್ರಮದೊಳು ಸ್ವರ್ಗದ ದಾರಿಯ ಹಿಡಿದರು ಅಸ್ಥಿರ ಜೀವನವೆನ್ನುತಲಿ
ಕ್ಷಮೆ ದಮೆಯಿಂದಲಿ ಪಾರಮಾರ್ಥ ಮೇಣ್ ಪ್ರಪಂಚದನುಭವ ಪಡೆಯುತಲಿ
ಈ ಮಹಿ ಪ್ರಜೆಗಳ ಪ್ರೇಮದಿ ಸಲಹಿರಿ ಭಾರತಮಾತೆಯ ಕರುಣದಲಿ ॥

### ದೊಡ್ಡುಡಾನ್

ಪಂಚ ಭೂತದಿಂದಂಚಿತಮಾಗಿಹ ಕಾಯವು ಯಾರಿಗು ಸ್ಥಿರವಿಲ್ಲ
ವಂಚನೆ ಮೇಣ್ ನಿರ್ವಂಚನೆರಹಿತರು ಅಜ ಹರಿ ಹರರಿಗು ಬಿಡಲಿಲ್ಲ
ಸಂಚಿತ ಆಗಮ ಪ್ರಾರಬ್ಧದೊಳಗಿದೆ ಕ್ಷಣ ಭಂಗುರವಿದು ಜಗವೆಲ್ಲ
ಕಿಂಚಿತ್ ಜ್ಞಾನದ ಸ್ನಾನವಗೈದರೆ? ಮಾಯಾಪ್ರಪಂಚದ ಸೋಂಕಿಲ್ಲ ॥

### ಶ್ಲೋಕ

ತಂದೆಯಿಲ್ಲದ ಜನತೆಗಾಶೀರ್ವದಿಸಿಯೆನ್ನುತ ಲಗುಬಗೆ
ಅಂದು ನಲವತ್ತೆಂಟು ಜನವರಿ ಮುವತ್ತೊಂದನೆ ತೇದಿಗೆ ॥

### ಚಾಲುಡಾನ್

ರಾಮಭಜನೆ ಪ್ರಿಯ ಗಾಂಧಿ ಕಳೇಬರ ಜಗನ್ಮೋಹನಾಕಾರದಲಿ
ಸಮಸ್ತ ಭೂಷಣದಲಂಕೃತದಿ ಮಿಗೆ ಶೋಭಿಸುತಿಹ ಮರುಸಮಯದಲಿ ॥
ಅಮಿತ ರಾಜಮರ್ಯಾದೆಗಳೊಂದಿಗೆ ಬಿಜಯಗೈಸಿ ರಾಜಘಾಟಿನಲಿ
ಆ ಮನು ಮಾರ್ಗದಿ ದಹನವಗೈದರು ರಾಮದಾಸ್ ಗಾಂಧಿಯು ದುಃಖದಲಿ॥

### ಚಿಕ್ಕುಡಾನ್

ಎಲ್ಲೆಲ್ಲು ದುಃಖ ಸಂತಾಪ ಸಭೆಗಳ್ಮಯವಾಯ್ತು
ಎಲ್ಲೆಲ್ಲು ಅಮಿತ ಹರತಾಳ ಯಶಸ್ವಿಯೊಳಾಯ್ತು
ಎಲ್ಲೆಲ್ಲು ಅನ್ನ ಮೇಣ್ ವಸ್ತ್ರದಾನಮಯವಾಯ್ತು
ಎಲ್ಲೆಲ್ಲು ಗಾಂಧಿಯಾತ್ಮಕ್ಕೆ ಶಾಂತಿ ಕೋರಾಯ್ತು ॥

### ಗುಲ್ಲುಡಾನ್

ಬೃಹದ್ಭಾರತದ ಪ್ರಜೆಗಳಳುತ
ಸ್ನೇಹಸಂಸರ್ಗದಿ ಮನವಿಡುತ ।
ಪರಮಾತ್ಮರ ಚಿತಾಭಸ್ಮ ತರುತ
ಮಹಿರುಹಶಿಲೆಗಳು ಕರಗುವಂತೆ ನದಿಗಳಲಿ ವಿಸರ್ಜಿಸುತ ॥

### ಶ್ಲೋಕ

ಜಗದೊಳಿದ ಬರದೋದಿ ಕೇಳುವ ತ್ಯಾಗಿಗಳ ಸದ್ವೃಂದಕೆ
ಯೋಗಪೂರಿತ ಚತುರವಿಧ ಪುರುಷಾರ್ಥ ಲಭ್ಯವು ಅಂತ್ಯಕೆ ॥

### ಚಾಲ್

ಶ್ರೀವರಸಂಪ್ರಿಯ ಭಕ್ತ ತುಕನ್‌ಗಿರಿ ಗುರುಪಟ್ಟಣ್ಣನ ಗಾಂಧಿಜಿಯೆ
ಕೋವಿದ ನಂಜನ ನೀಲ್ಕಂಠನ ವಿಷಕಂಠನು ರಚಿಸಿದ ಪದ ಸಿರಿಯೆ ॥

* * *

## ೫. ನೇತಾಜಿ

ಅಭಿಮಾನ ಮೇರು ಬೋಸ ಬಾಬು ಸುಬಾಸ ಚಂದ್ರ
ಸೌಭಾಗ್ಯ ಭಾರತಿಯಳ ಈ ಭುವನರಾಜ್ಞಿಗೈದೆ ॥ಪಲ್ಲವಿ॥

ಶ್ರೀಮಂತ ಕುಲದಿ ಜನಿಸಿ ಧೀಮಂತಧೀರನೆನಿಸಿ
ಪ್ರೇಮಾಂತರಂಗವೆರಸಿ ಸೀಮಾಂತ ರಾಷ್ಟ್ರಪಡೆದೆ ॥೧॥

ಪರದೇಸಿ ರಾಜನೀತಿ ಗುರುಗಾಂಧಿ ತತ್ವದಿಂದ
ಜಾರದೆಂದು ನಾಡಿನಿಂದೆ ಬೇರೊಂದು ಮಾರ್ಗವಿಡಿದೆ ॥೨॥

ಏಕಾಂತವಾಸದಲ್ಲಿ ಏಕೇನುಯೆಂಬುದರಿದು
ಏಕಾಂಗವೀರನಾಗಿ ಏಕಾಧಿಪತ್ಯಪಡೆದೆ ॥೪॥

ಜರ್ಮನಿಯ ಸೇರಿ ಮೊದಲು ಮಾರ್ಮಲೆತ ಆಂಗ್ಲರನ್ನು
ಚೂರ್ಮಾಡ್ವ ಬಗೆಯನರಿತು ನೂರ್ಮಡಿಯ ಶಕ್ತಿ ಪಡೆದೆ ॥೫॥

ಜಾಪಾನ ನೆರವಿಯಿಂದ ನೀ ಪಡೆದು ಅಂಡಮಾನ
ದ್ವೀಪಾಂತದಿಂದ ಹೊರಟು ಅಪರೂಪ ಯುದ್ಧಗೈದೆ ॥೬॥

ರಣಯಜ್ಞಕ್ಕಾಗಿ ನಡೆದು ರಣಭೇರಿಯನ್ನು ಹೊಡೆಸಿ
ಮಣಿಪುರದ ಇಂಫಾಲೊಳಗೆ ರಣಲಕ್ಷ್ಮಿ ಹಸ್ತವಿಡಿದೆ ॥೭॥

ಜಂಗೀಬ್ರಟೀಷರಿಂದ ರಂಗೂನು ಸಿಂಗಪುರವ
ಸಂಗರಾಗ್ರದಲ್ಲಿ ಪಡೆದು ಬಂಗಾಳ ಸಿಂಹನಾದೆ ॥೮॥

ಆಜಾದಹಿಂದ ಸರಕಾರ್ ಧ್ವಜದಡಿಯೊಳಿರಿಸಿ ಕಾರ್ಬಾರ್
ನಿಜ ಹಿಂದು ಮುಸ್ಲಿಮೈಕ್ಯ ಸೃಜಿಸಿಹುದು ನಿನ್ನ ದಯದೆ ॥೯॥

ಭಾಷಾಭಿಮಾನವಡೆದ ವಿಷಧರನ ಅಮೃತಕಂಠ
ಘೋಷಿಸುವ ಕೃತಿಗಳಿಂದ ತೋಷಿಸಲಿ ಜಗವುಯೆಂದ ॥೧೦॥

* * *

## ೬. ಜವಾಹಿರ್‌ಲಾಲ್ ನೆಹರು

ಜೈ ಭಾರತಮಾತೆಯ ಕಂಠಾಭರಣಾ
ಭಾರತ ಮಂತ್ರಿಯೆ ನಿನಗೆ ನಮೋ ॥ಪಲ್ಲವಿ॥

ನೆಹರೂ ವಂಶದ ಕೀರ್ತಿಲಲಾಮ
ಐಹಿಕ ಭೋಗದ ಶಿಖರದ ಸೋಮ ।
ಮೋಹನದಾಸ್ ಜೈಗಾಂಧಿಯ ಕುಸುಮ
ಅಹಿಂಸತತ್ವದ ಸುಧೆಯ ಸುಧಾಮ ॥೧॥

ಯೂರೋಪ್ ಖಂಡದಿ ವಿದ್ಯವ ಕಲಿತ
ಬಾರಟ್ಲಾ ಘನ ಪದವಿಯ ಬೆರೆತ
ಪರಮ ಬ್ರಿಟಿಷರ ಹೃದಯವನರಿತ
ಭಾರತ ಬಂಧಿವಿಮೋಚನೆದಾತ ॥೨॥

ಗ್ಯಾರೀಬಾಲ್ಡಿಯ ಚರಿತೆಯನೋದಿ
ಭಾರತ ಕ್ರಾಂತಿಗೆ ಹಾಕಿದೆ ಹಾದಿ
ಪರರ ಪ್ರಲೋಭನ ಮಾಡುತ ಬೂದಿ
ಭಾರತಕಾಂಗ್ರೆಸ್ ಭವ್ಯಪ್ರವಾದಿ ॥೩॥

ಮೋತೀಲಾಲರ ಮೋಹನಕುವರ
ಜಾತಿಮತ್ಸರ ಸಂಗವಿದೂರ ।
ನೀತಿವಿಶಾರದ ಕ್ರಾಂತಿವಿಹಾರ
ನೇತಾಜಿಯ ನವಯುಗದಾತಾರ ॥೪॥

ಆನಿಬೆಸೆಂಟರು ಹೂಡಿದ ಹೊಸದು
ಅನುಪಮ ಹೋಂರೂಲ್ ಚಳುವಳಿಲಿಳಿದು
ಜ್ಞಾನಿಶಿಖಾಮಣಿ ತಿಲಕರ ಬೆರೆದು
ಜನಮಣಿಯೆನಿಸಿದೆ ತ್ಯಾಗದಿಬಲಿದು ॥೫॥

ಯುವಕಪ್ರಪಂಚದ ಪ್ರಭು ನೀನಿಂದು
ನವಭಾರತ ನಿರ್ಮಾಣಕೆಯೆಂದು
ಅವತರಿಸಿದ ಮಾಪುರುಷನುಯೆಂದು
ಭುವನಪ್ರಸಿದ್ಧರು ಪೊಗಳಿಹರಿಂದು ॥೬॥

ಭಾರತದಾರ್ಥಿಕ ಸ್ವಾತಂತ್ರ್ಯವನು
ದೊರಕಿಸಿಕೊಳ್ಳಲು ಸಾಮ್ರಾಜ್ಯವನು
ಹೋರಾಟದಿ ಪರದಾಡಿಸಿ ನೀನು
ಧರಿಸಿದೆ ಭಾರತದೀ ಭಾರವನು ॥೭॥

ಅಂತರರಾಷ್ಟ್ರೀಯ ದೃಷ್ಟಿಯ ಬೆಳೆಸಿ
ಕ್ರಾಂತಿಯ ಭಾರತ ಶಾಂತಿಯವೆರಸಿ
ನಿಂತಿರಲೆಂಬಾಶೋತ್ತರವಿರಿಸಿ
ಅಂತರ್ವೇದನೆಯೊಳಗಿಹೆ ಶ್ರಮಿಸಿ ॥೮॥

ನ್ಯಾಯಶಾಸ್ತ್ರ ಪಾರಂಗತ ಖ್ಯಾತ
ಧ್ಯೇಯಸಾಧನೆಯ ನಿಜಸಂಪ್ರೀತ
ಕಾಯಶಕ್ತಿ ಕಲ್ಪನೆಗೆ ಅತೀತ
ಪ್ರಿಯಸಂಭಾಷಣೆ ಸಮರಸದೂತ ॥೯॥

ಸನ್ನುತ ಶೇಷಾದ್ರೀಶನ ದಯದಿ
ಕನ್ನಡಲಾವಣಿ ಗುರುವಾಶ್ರಯದಿ
ಮನ್ನಣೆಪಡೆದಾ ವಿಷಧರ ಗಳದಿ
ನಿನ್ನಯ ಕೀರ್ತಿಯು ಬೆಳಗಿತು ಜಗದಿ ॥೧೦॥

* * *

ಲಾವಣಿ ವಿದ್ವಾನ್ ಎನ್. ವಿಷಕಂಠರಾವ್ ಡಬೇಕರ್ ಹುಟ್ಟು ಲಾವಣಿ ಕಲಾವಿದ. ಬಿ. ನೀಲಕಂಠಯ್ಯನವರ ಪಟ್ಟಶಿಷ್ಯ. ಗುರುಮುಖೇನ ಲಾವಣಿಗಾಯನ ಕಲಿತು ಹೆಸರಾದವರು. ವಿಷಕಂಠರಾವ್ ಕಾಂಗ್ರೆಸ್ ಕಾರ್ಯಕರ್ತ, ಸ್ವಾತಂತ್ರ್ಯ ಹೋರಾಟಗಾರ, ಜೀವನವನ್ನೆಲ್ಲಾ ಲಾವಣಿ ಗಾಯನ, ರಚನೆ, ಪ್ರಕಟಣೆ, ಪ್ರಚಾರಕ್ಕೆ ಮೀಸಲಿಟ್ಟ ಸಂಸ್ಕೃತಿ ಸೇವಕ. ಸ್ವಾತಂತ್ರ್ಯ ಚಳವಳಿಯ ಹಿನ್ನಲೆಯಲ್ಲಿ ಸೆರೆಮನೆವಾಸ ಅನುಭವಿಸಿದವರು. ಬ್ರಿಟಿಷರ ಆಕ್ರಮಣ ವಿರುದ್ಧ ಹೋರಾಡಿದ ಹೈದರಲಿ ಟಿಪ್ಪುಸುಲ್ತಾನ್, ಝಾನ್ಸಿಲಕ್ಷ್ಮೀಬಾಯಿ, ಸ್ವಾತಂತ್ರ್ಯ ಹೋರಾಟಗಾರರು, ಮಹಾತ್ಮ ಗಾಂಧೀಜಿ, ನೇತಾಜಿ, ನೆಹರು ಕುರಿತ ಲಾವಣಿಗಳು ಪ್ರಸ್ತುತ ಗ್ರಂಥದಲ್ಲಿವೆ. ಎಲ್ಲಾ ಲಾವಣಿಗಳಲ್ಲೂ ಗುರುಪರಂಪರೆ ಸ್ತುತಿ, ದೇಶಭಕ್ತಿ, ಸ್ವಾತಂತ್ರ್ಯ ಕಾಳಜಿ ಎದ್ದುಕಾಣುತ್ತದೆ. ಇವುಗಳ ಜೊತೆಗೆ ಮೈಸೂರು ಸಾಂಸ್ಕೃತಿಕ ಸಂದರ್ಭದ ಕುರುಹಾಗಿ ಮೂವತ್ತಕ್ಕೂ ಹೆಚ್ಚು ಲಾವಣಿಗಳನ್ನು ರಚಿಸಿದ್ದಾರೆ. ಸ್ವಾತಂತ್ರ್ಯ ಸಮರದ ಅಸಂಖ್ಯಾತ ಸಭೆಗಳಲ್ಲಿ ಇವರ ಲಾವಣಿ ಗಾಯನ ಮೊಳಗಿದೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು